# ನಾಳೆ ವಾಕ್ ಇನ್ ಇಂಟರ್‌ವ್ಯೂ

**ಮಂಗಳೂರು:** ಬೆಂಗಳೂರಿನ ತಾಂತ್ರಿಕ ಶಿಕ್ಷಣ ಮತ್ತು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಪದವೀಧರರು, ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಹೊಂದಿದವರಿಗೆ ಕೇಂದ್ರೀಕೃತ ವಾಕ್ ಇನ್ ಇಂಟರ್‌ವ್ಯೂ ಮಂಗಳೂರಿನ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಜು.26ರಂದು ಬೆಳಗ್ಗೆ 8.30ಕ್ಕೆ ನಡೆಯಲಿದೆ ಎಂದು ಕಾಲೇಜಿನ ಪ್ಲೇಸ್‌ಮೆಂಟ್ ಡೀನ್ ಪ್ರೊ. ರಶ್ಮಿ ಭಂಡಾರಿ ತಿಳಿಸಿದ್ದಾರೆ. 2017, 2018 ಹಾಗೂ 2019ರಲ್ಲಿ ಉತ್ತೀರ್ಣರಾದವರು ಇದರಲ್ಲಿ ಭಾಗವಹಿಸುವ ಅವಕಾಶವಿದೆ. ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ನವೀಕರಿಸಿದ ಸಿವಿಯ ಬಹುಪ್ರತಿಗಳು, ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರಗಳು, ಎಲ್ಲ ಮೂಲ ಪ್ರಮಾಣಗಳನ್ನು ಒಳಗೊಂಡಂತೆ ಗುರುತು ಕಾರ್ಡ್‌ಗಳ ಜೆರಾಕ್ಸ್ ಪ್ರತಿಗಳನ್ನು ತರಬೇಕು. ವಾಕ್ ಇನ್ ಸಂದರ್ಶನದಲ್ಲಿ ಐಬಿಎಂ, ರಿಲಯನ್ಸ್ ಜಿಯೋ, ಇನ್ಫೋಕಾಮ್, ಕೆಐಒಸಿಎಲ್ ಲಿಮಿಟೆಡ್, ಒಎನ್‌ಜಿಸಿ ಮಂಗಳೂರು, ಸಾಫ್ಟ್‌ವೇರ್ ಇಂಡಿಯಾ ಎಲ್‌ಎಲ್‌ಪಿ, ಆರ್ಟೆಕ್, ಹಿಂದೂಸ್ತಾನ್ ಯೂನಿಲಿವರ್ ಲಿಮಿಟೆಡ್, ಕೆನರಾ ವರ್ಕ್‌ಶಾಪ್ ಲಿಮಿಟೆಡ್ ಮಂಗಳೂರು, ಟ್ರ್ಯಾಕ್ಟರ್ಸ್ ಮತ್ತು ಫಾರ್ಮ್ ಎಕ್ವಿಪ್ಮೆಂಟ್ ಲಿಮಿಟೆಡ್, ಕ್ಯಾಲಿಪರ್ ಎಂಜಿನಿಯರಿಂಗ್ ಮತ್ತು ಲ್ಯಾಬ್ ಪ್ರೈವೇಟ್ ಲಿಮಿಟೆಡ್ ಕಂಪೆನಿಗಳು ಭಾಗವಹಿಸಲಿವೆ ಎಂದರು. ಪ್ಲೇಸ್‌ಮೆಂಟ್ ಕೋ- ಆರ್ಡಿನೇಟರ್ ಅನುಷಾ ಇದ್ದರು.